ಬಳಕೆದಾರರ ಸಂಘಟನೆಗಳಿಗೆ ಪ್ರೋತ್ಸಾಹ ಕೊಟ್ಟು, ಅದರ ಜೊತೆ ಅವರು ಕೇಳಿದ ಪ್ರಶ್ನೆಗಳಿಗೆ ಎಲ್ಲಾ ಸರ್ಕಾರಿ ಇಲಾಖೆಗಳು ಸೂಕ್ತ ಮಾಹಿತಿಯನ್ನು ಕೊಡುವಂತಹ ಅಧಿಕಾರ, ಅವರಿಗೆ ಬೇಕಾದಂತಹ ಸವಲತ್ತುಗಳನ್ನು ಕೊಡುವ ವ್ಯವಸ್ಥೆ ರಾಜ್ಯ ಸರ್ಕಾರ ಮಾಡಲು ಇಚ್ಛಿಸುತ್ತಿದೆ ಎಂಬುದು ಎಂದು ಪ್ರಶ್ನೆ. ಅದರ ಜೊತೆಯಲ್ಲಿ ಮಂಗಳೂರಿನಲ್ಲಿ ಡಿಸೆಂಬರ್ ಕೊನೆಯ ತನಕ 908 ಕೇಸ್‌ಗಳು ಮಾತ್ರ ದಾಖಲು ಆಗಿದ್ದು, ಯಾವುದೇ ಇತ್ಯರ್ಥ ಆಗದೆ ಇನ್ನೂ ಹಲವು ಕೇಸುಗಳು ಬರುತ್ತಾ ಇರುವುದರಿಂದ ಯಾವ ದಿವಸದ ಒಳಗಾಗಿ ಮಂಗಳೂರು ಕನ್ಸ್ಯೂಮರ್ಸ್ ದೂರು ವಿಭಾಗಕ್ಕೆ ತಾವು ಅಧ್ಯಕ್ಷರ ನೇಮಕ ಮಾಡುತ್ತೀರಿ ಎನ್ನುವುದು ಎರಡನೆಯ ಪ್ರಶ್ನೆಯಾಗಿದೆ.

ಶ್ರೀ ಎಸ್. ನಂಜಪ್ಪ:- ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದ ಮೊದಲ ಪ್ರಶ್ನೆ ಗ್ರಾಹಕರ ವೇದಿಕೆಗಳಿಗೆ ವಿಚಾರಗಳನ್ನು, ವಿಷಯಗಳನ್ನು ಒದಗಿಸಿಕೊಡುವಂತಹ ಒಂದು ಕಾರ್ಯವನ್ನು ಸರ್ಕಾರ ಮಾಡಬೇಕೆಂದು ಕೇಳಿದ್ದಾರೆ. ಗ್ರಾಹಕರ ವೇದಿಕೆಗಳನ್ನು ಈ ಸರ್ಕಾರ ಬಲಪಡಿಸುವಂತಹ ಅವರಿಗೆ ಮಾಹಿತಿ ಕೊಡುವಂತಹ, ದಿಕ್ಕಿನಲ್ಲಿ ಒಂದು ಉತ್ತಮ ಸಲಹೆಯನ್ನು ಮಾನ್ಯ ಸದಸ್ಯರು ಕೊಟ್ಟಿದ್ದಾರೆ. ಅದನ್ನು ತೀವ್ರವಾಗಿ ಪರಿಶೀಲನೆ ಮಾಡುತ್ತೇವೆ. ಮತ್ತು ಮಂಗಳೂರಿನ ಗ್ರಾಹಕರ ವೇದಿಕೆಗೆ ನ್ಯಾಯಾದೀಶರನ್ನು ನೇಮಕ ಮಾಡಬೇಕು ಎನ್ನತಕ್ಕಂತಹ ವಿಚಾರವನ್ನು ಸದಸ್ಯರು ಹೇಳಿದ್ದಾರೆ. ಕೆಲವೇ ದಿನಗಳಲ್ಲಿ ಮಂಗಳೂರಿನ ಗ್ರಾಹಕರ ವೇದಿಕೆಗೆ ಅಧ್ಯಕ್ಷರನ್ನು ನೇಮಕ ಮಾಡಲಾಗುತ್ತದೆ ಎನ್ನುವ ಭರವಸೆಯನ್ನು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ನೀಡಲು ಇಚ್ಛಿಸುತ್ತೇನೆ.

ವಿಷಯ:- ಬೆಂಗಳೂರು - ಮೈಸೂರು ಹೆದ್ದಾರಿ ಎಕ್ಸ್‌ಪ್ರೆಸ್ ರಸ್ತೆಯಾಗಿ ಪರಿವರ್ತನೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 66(594)

ಶ್ರೀ ಕೆ. ಎನ್ ನಾಗೇಗೌಡ (ಕಿರುಗಾವಲು)

ಮಾನ್ಯ : ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಬೆಂಗಳೂರು - ಮೈಸೂರು ರಾಜ್ಯ ಹೆದ್ದಾರಿಯನ್ನು ಎಕ್ಸ್‌ಪ್ರೆಸ್ ರೋಡ್ ಮಾಡಲು ಸರ್ಕಾರದವರು ಪರಿಶೀಲಿಸುವರೆ.

ಆ) ಹಾಗಿದ್ದರೆ ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಶಿವಾನಂದ ಹೆಚ್. ಕೌಜುಲಗಿ: ಲೋಕೋಪಯೋಗಿ ಸಚಿವರು

ಅ) ಇಲ್ಲ. ಪ್ರತ್ಯೇಕವಾದ ವೇಗದ ಹೆದ್ದಾರಿ ನಿರ್ಮಿಸಲು ಪ್ರಸ್ತಾಪಿಸಲಾಗಿದೆ.

ಆ) ಈಗ ಇರುವ ಬೆಂಗಳೂರು- ಮೈಸೂರು ರಾಜ್ಯ ಹೆದ್ದಾರಿಯನ್ನು ಸುಸ್ಥಿತಿಯಲ್ಲಿಡಲಾಗಿದೆ.

ಪ್ರತ್ಯೇಕವಾದ ವೇಗದ ಹೆದ್ದಾರಿಯನ್ನು ಖಾಸಗಿ ವಲಯದಲ್ಲಿ ಉದ್ಯಮಶೀಲರೇ ಬಂಡವಾಳ ತೊಡಗಿಸಿ ರಸ್ತೆ ನಿರ್ಮಾಣ ಮಾಡುವ ಬಗ್ಗೆ ಒಂದು ತಿಳುವಳಿಕೆ ಪತ್ರವನ್ನು ಅಮೇರಿಕಾದೇಶದ ವಿದೇಶಿ ಸಹಯೋಗ ಹೊಂದಿರುವ ಸಂಸ್ಥೆಯೊಡನೆ ಸಹಿ ಮಾಡಲಾಗಿದೆ.

ಶ್ರೀ ಕೆ.ಎನ್. ನಾಗೇಗೌಡ:- ಮಾನ್ಯ ಅಧ್ಯಕ್ಷರೆ, ಬೆಂಗಳೂರು ಮತ್ತು ಮೈಸೂರು ರಾಜ್ಯ ಹೆದ್ದಾರಿಗೆ ಎಕ್ಸ್-ಪ್ರೆಸ್‌ವೇ ಮಾಡುವುದಕ್ಕೆ ತಾವು ಖಾಸಗಿಯವರಾದ ಅಮೇರಿಕಾ ಹಾಗೂ ದೇಶದ ವಿದೇಶಿಯರು ಬಂದಿದ್ದಾರೆ ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ. ಇದರಲ್ಲಿ ಎರಡು ವಿಚಾರ, ಎಷ್ಟು ಕಂಪನಿಗಳು ಬಂದಿದೆ, ಅಮೇರಿಕಾದ ಒಂದೇ ಕಂಪನಿ ಬಂದಿದೆಯೋ? ಇನ್ನು ಯಾರ ಜೊತೆಯಾದರೂ ನಮ್ಮ ಸರ್ಕಾರ ಸಹಿ ಹಾಕಿದೆಯೋ ಇದು ಒಂದು. ಎರಡನೆಯದು ಪ್ರಾಜೆಕ್ಟ್ ರಿಪೋರ್ಟ್ ಆಗಿದೆಯಾ? ಮೂರನೆಯದು ಪ್ರಾಜೆಕ್ಟ್ ಕಾಸ್ಟ್ ಏನು, ಯಾವಾಗ ಪ್ರಾರಂಭ ಮಾಡುತ್ತೀರಿ ಯಾವಾಗ ಅಂತ್ಯಗೊಳಿಸುತ್ತೀರಿ ದಯವಿಟ್ಟು ತಿಳಿಸಬೇಕು.

ಶ್ರೀ ಜೆ. ಹೆಚ್.ಪಟೇಲ್ :- ಮಾನ್ಯ ಅಧ್ಯಕ್ಷರೆ, ಮೈಸೂರು, ಬೆಂಗಳೂರು ಮಧ್ಯೆ ಸೂಪರ್ ಹೈವೇಯನ್ನು ಖಾಸಗೀಯವರಿಗೆ ಕೊಡಬೇಕೆಂದು ತೀರ್ಮಾನ ಮಾಡಲಾಗಿದೆ. ನಾನು ಮಲೇಷಿಯಾದಲ್ಲಿ ಇದ್ದಾಗ ಒಂದು ಮೆಮರಾಂಡಂ ಆಫ್ ಅಂಡರ್‌ಸ್ಟ್ಯಾಂಡಿಂಗ್‌ಗೆ ಕಂಪನಿಯವರು ಬಂದರು ಅವರು ಅಲ್ಲಿ ಒಪ್ಪಂದ ಮಾಡಿಕೊಂಡರು, ಅವರಿಗೆ ಬೆಂಗಳೂರು, ಮೈಸೂರನ್ನು ಕೊಡುತ್ತೇವೆಂದು ಅಲ್ಲ, ಬೆಂಗಳೂರು, ಮೈಸೂರು ಆಗಬಹುದು, ಹಾಸನ, ಮಂಗಳೂರು ಆಗಬಹುದು ಮತ್ತು ಬೆಂಗಳೂರು ಯಲಹಂಕ ಆಗಬಹುದು. A kind of broad agreement. ಇಲ್ಲಿ ಅದೇ ಸಮಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇನ್ನು ಒಂದು ಅಮೇರಿಕನ್ ಕಂಪನಿಯೊಡನೆ ಅವರೂ ಅದನ್ನೇ ಸೂಪರ್ ಹೈವೇ ಮಾಡುವುದ ಕ್ಕೋಸ್ಕರ ಮೆಮರಾಂಡಮ್ ಆಫ್ ಅಂಡರ್ ಸ್ಟ್ಯಾಂಡಿಂಗ್ ಆಗಿದೆ. ಮೆಮರಾಂಡಂ ಆಫ್ ಅಂಡರ್ ಸ್ಟ್ಯಾಂಡಿಂಗ್‌ನಲ್ಲಿ ಫೈನಲ್ ಆರ್ಡರ್ ಕೊಟ್ಟಿದ್ದೇವೆ ಎಂದು ಅಲ್ಲ. ಈ ಎರಡು ಕಂಪನಿಗಳಲ್ಲಿ ನಮ್ಮ ರಾಜ್ಯದ ಹಿತದೃಷ್ಟಿಯಿಂದ ಯಾವುದು ಹಿತ ಆಗುತ್ತದೆಯೇ ಅದನ್ನು ಒಪ್ಪಿಕೊಳ್ಳುತ್ತೇವೆ.

ಶ್ರೀ ಕೆ. ಎನ್. ನಾಗೇಗೌಡ:- ಯಾವುದು ಹಿತವಾಗುತ್ತದೆ ಅದನ್ನು ಮಾಡಿ. ಆದರೆ ಒಂದು ಲ್ಯಾಂಡ್ ಅಕ್ವಿಸಿಷನ್‌ಗೆ ಸ್ಪೆಷಲ್ಲಾಗಿ ತಾವು ನಮ್ಮ ಸರ್ಕಾರ ಅಮೆಂಡ್‌ಮೆಂಟ್ ಮಾಡುತ್ತಾದೆಯೋ ಲ್ಯಾಂಡ್ ಅಕ್ವಿಸಿಷನ್ ದೊಡ್ಡ ಸಮಸ್ಯೆ. ತಮಗೆ ಗೊತ್ತಿರುವ ಹಾಗೆ ನಾಲ್ಕು- ನಾಲ್ಕು ಎಕರೆ ಜಮೀನು ಕೊಡಬೇಕು. ಅದರಲ್ಲೂ ಬೆಂಗಳೂರಿನಲ್ಲಿ ಮತ್ತು ಮೈಸೂರಿನಲ್ಲಿ ಜಮೀನು ಬಿಡುವುದು ಬಹಳ ಕಷ್ಟ ಕಾಸ್ಟ್‌ಲೀ ಲ್ಯಾಂಡ್.

ಹಳ್ಳಿಗಳ ಏರಿಯಾದಲ್ಲಿ ಇರಿಗೇಷನ್ ಮಾಡಿಕೊಂಡಿದ್ದಾರೆ. ಒಂದು ಅಡಿ ಬಿಡುವುದಿಲ್ಲ. ಅಂತಹ ಸಂದರ್ಭದಲ್ಲಿ ಈ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳುವುದಕ್ಕೆ ಸರ್ಕಾರ

ವಿಶೇಷವಾದಂತಹ ಲ್ಯಾಂಡ್ ಅಕ್ವಿಸಿಷನ್ ಆಕ್ಟ್ ತರುತ್ತದೆಯೋ ಎರಡನೆಯದು ನಾವು ನ್ಯಾಷನಲ್ ಹೈವೇಗಳಿಗೂ ಸಹ ಈ ರೀತಿಯಾಗಿ ಅಗ್ರೀಮೆಂಟ್ ಮಾಡಿಕೊಳ್ಳುವುದಕ್ಕೆ ಸಾಧ್ಯ ಇದೆಯೇ?

ಶ್ರೀ ಶಿವಾನಂದ ಹೆಚ್. ಕೌಜಲಗಿ:- ನಾವು ಲ್ಯಾಂಡ್ ಅಕ್ವೀಷನ್ ಆಕ್ಟ್‌ನಲ್ಲಿ ಅಮೆಂಡ್‌ಮೆಂಟ್ ತರಬೇಕಂದು ಈಗಾಗಲೇ ಸರ್ಕಾರ ಒಂದು ನಿರ್ಧಾರ ಕೈಗೊಂಡಿದೆ. ಎರಡನೆಯದಾಗಿ ಇದು ನಮ್ಮ ಸರ್ಕಾದವರು ಹೇಳಿದ ಪ್ರಕಾರ ನ್ಯಾಷನಲ್ ಹೈವೇ ಸಹಿತ ಈ ಪ್ರಕಾರ ಮಾಡಬೇಕೆಂದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಕೆ.ಎನ್. ನಾಗೇಗೌಡ:- ಒಂದು ಅಂಶ ನನಗೆ ಅರ್ಥವಾಗಿಲ್ಲ. ಬೆಂಗಳೂರು, ಮೈಸೂರು ಹೈವೇಗೆ ಎಷ್ಟು ಕೋಟಿ ಹಣ ಎಸ್ಟಿಮೇಟ್ ಮಾಡಿದ್ದೀರಿ ಎಂದು ತಾವು ಹೇಳಲಿಲ್ಲ.

ಶ್ರೀ ಶಿವಾನಂದ ಹೆಚ್. ಕೌಜಲಗಿ:- ಸುಮಾರು ಐದು ನೂರು ಕೋಟಿ ರೂಪಾಯಿಗಳು ಬೇಕಾಗಬಹುದು.

ಅಧ್ಯಕ್ಷರು :- ಶಿವಪ್ಪನವರೇ ಇದಕ್ಕೆ ಸಂಬಂಧಪಟ್ಟ ಉಪ ಪ್ರಶ್ನೆ ಇದೆಯೋ?

ಶ್ರೀ ಎಚ್. ಶಿವಪ್ಪ:- ಅಧ್ಯಕ್ಷರೆ, ಸನ್ಮಾನ್ಯ ಮಂತ್ರಿಗಳು ಎಮರ್ಜನ್ಸಿ ಆಗಿ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಿಕ್ಕೆ ಅಮೆಂಡ್‌ಮೆಂಟ್ ತರುತ್ತೇವೆ ಎಂದು ಈಗಾಗಲೇ ಅಕ್ವಿಷನ್ಸ್ ಆಕ್ಟ್‌ನಲ್ಲಿ ಇದೆ.

Section 170 is already there to apply emergency Clause and acquire land under emergency situation. ಇದರ ಬಗ್ಗೆ ಗಮನ ಹರಿಸಬೇಕು.

ಶ್ರೀ ಜೆ.ಹೆಚ್.ಪಟೇಲ್:- ಮಾನ್ಯ ಅಧ್ಯಕ್ಷರೆ, ಸೂಪರ್ ಹೈವೇ ಮಾಡುವುದಕ್ಕೆ ಯಾರು ಬಂಡವಾಳ ತೊಡಗಿಸುವುದಕ್ಕೆ ಬಂದಿದ್ದಾರೆ. ಅವರು ಮತ್ತು ಯಾರು ಜಮೀನು ಮಾರುವುದಕ್ಕೆ ತಯಾರಿದ್ದಾರೆ ಅವರವರು ಹೊಂದಿಕೊಂಡರೆ, ನಾವು ಈ ಕನಸೆಂಟ್‌ಅವಾರ್ಡ್ ಕೊಡುಸುವುದಕ್ಕೆ ಕಾಲ ಹೋಗುವುದಿಲ್ಲ ಸರ್ಕಾರವೇ ಅಕ್ವೈರ್ ಮಾಡಿಕೊಂಡು ಕೊಡಬೇಕೆಂದರೆ ಕಾಲ ಹೋಗುತ್ತದೆ ಎಂದು ನಾವು ಯಾವ ಕಂಪನಿಗಳು ಬಂದಿವೆ ಅವರಿಗೆ ಈ ಸರ್ಕಾರ ಅಸಿಸ್ಟ್ ಮಾಡುತ್ತದೆ. ಪಾರ್ಟಿಗಳೊಂದಿಗೆ ಮಾತನಾಡಿ ಹೇಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಬೆಂಗಳೂರು, ಮೈಸೂರು ರಾಜ್ಯ ಹೆದ್ದಾರಿ ಎಕ್ಸ್‌ಪ್ರೆಸ್ ರೋಡ್ ಮಾಡತಕ್ಕಂಥದ್ದು ಎಷ್ಟು ವರ್ಷದಲ್ಲಿ ಇದು ಮುಗಿಯುತ್ತದೆ. ಮುಗಿದ ನಂತರ ಅವರು ಹಣ ಮತ್ತೆ ಹಿಂದಕ್ಕೆ ಪಡಯಬೇಕಾದರೆ, ಯಾರ್ಯಾರ ತಲೆ ಮೇಲೆ ಈ ಹಣವನ್ನು ಹಾಕುತ್ತೀರಿ? ಎಷ್ಟು ವಸೂಲು ಮಾಡುತ್ತೀರಿ? ನೀವು ಜನಗಳಿಂದ ಯಾವ್ಯಾವ ರೀತಿಯಲ್ಲಿ ವಸೂಲು ಮಾಡುತ್ತೀರಿ?

ಶ್ರೀ ಜೆ.ಹೆಚ್. ಪಟೇಲ್:- ಮಾನ್ಯ ಅಧ್ಯಕ್ಷರೆ, ಸೂಪರ್ ಹೈವೇ ಮಾಡಲಿಕ್ಕೆ ಸುಮಾರು ಐದು ನೂರು ಕೋಟಿ ರೂಪಾಯಿ ಅವರು ಖರ್ಚು ಮಾಡುತ್ತಾರೆ. ಸೂಪರ್ ಹೈವೇ ಅಂದರೆ ಅದು ಆರು ಲೈನ್ ಬರುತ್ತದೆ. ಈ ಕಡೆ ಮೂರು ಹೋಗುವುದು, ಆ ಕಡೆ ಮೂರು ಹೋಗುವುದು, ಆ ಮೇಲೆ ಮಧ್ಯೆ ಮಧ್ಯೆ ರಿಕ್ರಿಯೇಷನ್ ಸೆಂಟರ್ ಟೆಲಿಫೋನ್ ಬೂತ್, ಪೆಟ್ರೋಲ್ ಬಂಕ್ ಇವೆಲ್ಲಾ ಸವಲತ್ತುಗಳನ್ನು ಅವರು ಒದಗಿಸಿಕೊತ್ತಾರೆ. ಒದಗಿಸಿಕೊಟ್ಟಾಗ ಯಾರು ಆ ರಸ್ತೆಯಲ್ಲಿ ಹೋಗಬೇಕೆಂದು ಇಚ್ಛೆ ಪಡುತ್ತಾರೋ ಅವರು 100 ರೂ ಜಾಸ್ತಿ ಕೊಡಬಹುದು ಅದು ನಾವು ಎಷ್ಟು ವರ್ಷ ಅವರಿಗೆ ಕಾಂಟ್ರ್ಯಾಕ್ಟ್ ಕೊಡಬೇಕು.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಹಾಗೇ ಆಗುವುದಿಲ್ಲ. ಅವರು ನೂರು ರೂಪಾಯಿ ಕೊಡಬಹುದು, 20 ರೂಪಾಯಿ ಕೊಡಬಹುದು. ಅದು ಸ್ಪಷ್ಟವಾಗಿ ಬೇಕು ಈಗ ನೀವು 500 ಕೋಟಿ ರೂಪಾಯಿ ಬಂಡವಾಳ ಹೊರಬೇಕಾದರೆ, ಅದಕ್ಕೆ ನಿಮ್ಮ ಷರತ್ತು ಇರಬೇಕಲ್ಲ. ಅವರು ಹಣವನ್ನು ನಿಮಗೆ ಕೊಡಬೇಕಾದರೆ ನೀವು ಬಡ್ಡಿ ಸಹಿತ ಹಣವನ್ನು ವಸೂಲು ಮಾಡುತ್ತಾರೆ. ನೀವು ಯಾರ ತಲೆ ಮೇಲೆ ವಸೂಲು ಮಾಡುತ್ತೀರಿ . ಮಾನ್ಯ ಉಪಮುಖ್ಯಮಂತ್ರಿಗಳು ಈಗ ಈ ಹಣವನ್ನು ವಸೂಲು ಮಾಡತಕ್ಕಂಥ ವಿಧಾನವನ್ನು 20 ಕೊಡುವವರು ಕೊಡಲಿ ಎಂದು ಹೇಳುವುದು ಅದು ಹಾಗೆ ಅಲ್ಲ. ನಿಮ್ಮ ಸರ್ಕಾರದ ಒಂದು ನೀತಿ ಇರಬೇಕಲ್ಲ. ಅವರು ಷರತ್ತು ಹಾಕಿದಮೇಲೆ ಒಂದು ಷರತ್ತು ನಿಮಗೆ ಬಂದಮೇಲೆ 500 ಕೋಟಿ ರೂಪಾಯಿ ಅವರು ಹಣವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಾದರೆ, ಯಾರ ತಲೆ ಮೇಲೆ ಹಾಕುತ್ತೀರಿ. ಆ ರಸ್ತೆಯಲ್ಲಿ ತಿರುಗಾಡತಕ್ಕಂಥವರು ಯಾರು? ಅದಕ್ಕೆ ಒಂದು ವಿಂಗಡಣೆ ಮಾಡಬೇಕು ಮತ್ತು ಸಾಮಾನ್ಯ ಜನ ಏನು ಕೊಡದೇ ಇರತಕ್ಕಂಥವರು ಸರ್ಕಾರದ ಮರ್ಜಿ ಮೇಲೆ ಸಾರ್ವಜನಿಕರು ಅಷ್ಟೇ ತಿರುಗಾಡತಕ್ಕಂಥ ರಸ್ತೆ ಯಾವುದು? ಇದು ಒಂದು ತೀರ್ಮಾನವಾಗಬೇಕು. ಅದುದರಿಂದ ತೆರಿಗೆ ಯಾವ ರೀತಿ ಹಾಕುತ್ತೀರಿ ಎಂದು ದಯವಿಟ್ಟು ಹೇಳುತ್ತೀರ?

ಶ್ರೀ ಜೆ. ಹೆಚ್. ಪಟೇಲ್:- ಇದು ಡೆಡಿಕೇಟೇಡ್ ರೋಡ್ಸ್ ಪ್ರೈವೇಟ್ ಸೂಪರ್ ಹೈವೇ ಮಾಡಿಕೊಂಡವರು ಟೋಲ್ ಕಲೆಕ್ಟ್ ಮಾಡುತ್ತಾರೆ. ಅವರು ಎಷ್ಟು ವರ್ಷ ಕಲೆಕ್ಟ್ ಮಾಡುತ್ತಾರೆ ಎನ್ನುವುದು, ನಾವು ಎಷ್ಟು ವರ್ಷ ಲೀಸ್ ಕೊಡುತ್ತೇವೆ ಎನ್ನುವುದರ ಮೇಲೆ ಇದೆ. ಅದು ಅವರ ಪ್ರೈವೇಟ್ ಪ್ರಪರ್ಟಿ ಆಗುವುದಿಲ್ಲ. ಬೇರೆ ಏನೂ ಕೊಡದೇ ನಮ್ಮಷ್ಟಕೆ ನಾವೇ ಲಾರಿ ಓಡಿಸಿಕೊಂಡು ಹೋಗುತ್ತೇವೆ ಎನ್ನುವವರಿಗೆ ಬೇರೆ ಹೈವೇ ಇದೆ. ಇದು ಯಾರ್ಯಾರು ಸೇಫ್ ಆಗಿ ವೇಗವಾಗಿ, ಎಲ್ಲಾ ಫೆಸಿಲಿಟಿಸ್‌ನ್ನು ಉಪಯೋಗ ಮಾಡಿಕೊಳ್ಳಬೇಕು ಎಂದು ಎನ್ನತಕ್ಕಂಥ ಅನುಕೂಲವಾಗಿರತಕ್ಕಂಥ ಎಂ.ಎಲ್.ಎಗಳು ಇರುತ್ತಾರೆ, ಮಂತ್ರಿಗಳು ಇರುತ್ತಾರೆ ಅವರು ಆ ರೋಡ್‌ನಲ್ಲಿ ಹೋಗಬಹುದು.

ಶ್ರೀ ವಾಟಾಳ್ ನಾಗರಾಜ್:- ಇದು ಬರೀ ಅನುಕೂಲವಾಗಿರತಕ್ಕಂಥ ಎಂ.ಎಲ್.ಎಗಳು ಮಂತ್ರಿಗಳಿಗೆ ಮಾತ್ರ. ಮಿಕ್ಕಿದವರಿಗೆ ಇಲ್ಲ ಇದು. ಹಾಗಿದ್ದರೆ ಇದನ್ನು ಏಕೆ ಮಾಡಬೇಕು. ಈ

ಎಕ್ಸ್‌ಪ್ರೆಸ್ ರಸ್ತೆ ಬಡವರಿಗೆ ಜನಸಾಮಾನ್ಯರಿಗೆ, ರೈತ ವರ್ಗದವರಿಗೆ ಆಗತಕ್ಕಂಥ ಆಗದೇ ಇರತಕ್ಕಂಥಾದ್ದು ಏಕೆ. ಆ ರಸ್ತೆಯಲ್ಲಿ ಕಬ್ಬು ಹೊಡೆಯತಕ್ಕಂಥ ಬಡ ರೈತರು ಲಕ್ಷಾಂತರ ಗಾಡಿ ಓಡಿಸಬೇಕಾಗುತ್ತದೆ. ಇವರ ಮೇಲೆ ತೆರಿಗೆ ಹಾಕುತ್ತಾರೆ ಇವರು. ಬಡವರಿಗೆ ತೆರಿಗೆ ಹಾಕುತ್ತಾರೆ ಇವರು. ಅದುದರಿಂದ ಸರ್ಕಾರದ ಒಂದು ಸ್ಪಷ್ಟ ನಿಲುವು ಬೇಕು.

ಶ್ರೀ ಜೆ.ಹೆಚ್. ಪಟೇಲ್:- ಡೆಡಿಕೇಟೇಡ್ ರೋಡ್ ಎಂದರೆ ಬೇರೆ ಯಾರೂ ಅಥವಾ ಕಬ್ಬಿನ ಗಾಡಿ ಹೋಗುವ ಹಾಗೆ ಇಲ್ಲ. ಆ ಗಾಡಿ ಹೋಗುವುದಕ್ಕೆ ನಮ್ಮ ಸರ್ಕಾರಿ ರಸ್ತೆ ಇದೆ.

ಶ್ರೀ ಜೆ. ಬಸವಣ್ಣೆಪ್ಪ:- ಈಗ ಬೆಂಗಳೂರು ಮೈಸೂರು ರೋಡ್ ಎಷ್ಟು ಕಿಲೋಮೀಟರ್ ಇದೆ. ಈ ಎಕ್ಸ್‌ಪ್ರೆಸ್ ರೋಡ್ ಮಾಡುವುದರಿಂದ ಎಷ್ಟು ಕಿಲೋಮೀಟರ್ ಕಡಿಮೆ ಯಾಗುತ್ತದೆ?

ಶ್ರೀ ಶಿವಾನಂದ ಹೆಚ್ ಕೌಜಲಗಿ:- ಬೆಂಗಳೂರು ಮೈಸೂರು ರಸ್ತೆ 139 ಕಿಲೋಮೀಟರ್ ಇದೆ. ಈ ಹೊಸ ರಸ್ತೆ ಮಾಡುವುದರಿಂದ 129 ಕಿಲೋ ಮೀಟರ್ ಅಥವಾ ಇನ್ನು ಅದಕ್ಕಿಂತಲೂ ಕಡಿಮೆಯಾಗಬಹುದು.

ಅಧ್ಯಕ್ಷರು:- ಮಾನ್ಯ ಶಿವನಂಜಪ್ಪನವರೆ, ತಾವು ಕಳುಹಿಸಿರುವ ಪ್ರಶ್ನೆಯನ್ನು ನೀರಾವರಿ ಇಲಾಖೆಗೆ ವರ್ಗಾಯಿಸಿದ್ದಾರೆ. ಇವತ್ತು ಬರುವುದಿಲ್ಲ. ಅದು ನೀರಾವರಿ ಇಲಾಖೆಯ ಪ್ರಶ್ನೆಯನ್ನು ತೆಗೆದುಕೊಂಡಾಗ ಬರುತ್ತದೆ. ನೀರಾವರಿ ಮಂತ್ರಿಗಳು ಉತ್ತರ ಕೊಡುವ ದಿವಸ ಬರುತ್ತದೆ.

ವಿಷಯ:- ಗುಬ್ಬಿ ತಾಲ್ಲೂಕು ಸಿ.ಎಸ್.ಪುರ ಹೋಬಳಿಯಲ್ಲಿ ವಿದ್ಯುತ್ ಕಡಿಮೆ ವೋಲ್ಟೇಜ್.

ಚುಕ್ಕೆ ಗುರುತಿನ ಪ್ರಶ್ನೆ ಸಂ 68(499)

ಶ್ರೀ ಜಿ.ಎಸ್. ಶಿವನಂಜಪ್ಪ (ಗುಬ್ಬಿ)

ಮಾನ್ಯ ಉಪ ಮುಖ್ಯಮಂತ್ರಿಗಳು : ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು ಸಿ.ಎಸ್. ಪುರ ಹೋಬಳಿಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ವಿದ್ಯುತ್ ವೋಲ್ಟ್‌ಜ್ ತುಂಬ ಕಡಿಮೆ ಇರುವುದರಿಂದ ರೈತರ ಪಂಪ್‌ಸೆಟ್‌ಗಳು ನಡೆಯದಿರುವುದು ಹಾಗೂ ಅಕ್ಕಿ, ರಾಗಿ ಹಾಗೂ ಇತರೆ ಪದಾರ್ಥಗಳನ್ನು ಹಿಟ್ಟು ಮಾಡಲು ತೊಂದರೆಯಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದರೆ ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ. ಜೆ.ಹೆಚ್. ಪಟೇಲ್ : ಉಪ ಮುಖ್ಯ ಮಂತ್ರಿಗಳು

ಅ) ಹೌದು.